ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿರತಕ್ಕ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸುತ್ತೇನೆ.

೧೬. ಕಮಲಾಪುರ ಕ್ಷೇತ್ರದಲ್ಲಿ ಅಂಬಲಗಾ ಗ್ರಾಮದ ಹತ್ತಿರ ಇಂಗಕೆರೆ ಒಡೆದು ಹೋಗಿ ರೈತರ ಬೆಳೆ ಹಾನಿಯಾಗಿ ಪರಿಹಾರಕ್ಕೆ ಮನವಿ.

ಶ್ರೀ ಬಿ. ರಾಮಕೃಷ್ಣ.— ಮಾನ್ಯ ಅಧ್ಯಕ್ಷರೇ ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ವಿಧಾನಸಭಾ ಮಂತ ಕ್ಷೇತ್ರದಲ್ಲಿ ಬರುವ ಅಂಬಲಗಾ ಗ್ರಾಮದ ಹತ್ತಿರ ಸುಮಾರು ೫ ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಭೂ ಸೇನಾ ನಿಗಮದ ವತಿಯಿಂದ ನಿರ್ಮಿಸಲಾಗುತ್ತಿರುವ ಇಂಗುಕೆರೆ (ಪರ್‌ಕ್ಯುಲೇಷನ್ ಟ್ಯಾಂಕ್) ದಿನಾಂಕ ೧೪-೮-೧೯೮೭ರಂದು ಬಂದ ಭಾರಿ ಮಳೆಯಿಂದಾಗಿ ಸಂಪೂರ್ಣ ತುಂಬಿದ ಕೆರೆ ಒಡೆದುದರಿಂದ ಕೆರೆಯ ಕೆಳಭಾಗದಲ್ಲಿ ಬರುವ ಬಡ ರೈತರ ಬೆಳೆ ಹಾಗೂ ಹೊಲಗಳಲ್ಲಿರುವ ಫಲವತ್ತಾದ ಮಣ್ಣು ಹೆಚ್ಚಿನ ಪ್ರಮಾಣದಲ್ಲಿ ಕೊಚ್ಚಿಕೊಂಡು ಹೋಗಿರುವುದರಿಂದ ಈ ಗ್ರಾಮದ ರೈತರಿಗೆ ಲಕ್ಷಾಂತರ ರೂಪಾಯಿಗಳು ನಷ್ಟವಾಗಿದೆ. ಇದನ್ನು ಕಂಡು ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ನೆರವು ಒದಗಿಸಲು ಕೇಳಿಕೊಂಡ ವಿಷಯವು ಪತ್ರಿಕೆಗಳಲ್ಲಿ ಪ್ರಕಟಗೊಂಡಾಗ ಸಂಬಂಧಪಟ್ಟ ಭೂ ಸೇನಾ ನಿಗಮದವರು ಪರಿಹಾರಧನವನ್ನು ನಿಗಮದ ವತಿಯಿಂದಲೇ ರೈತರಿಗೆ ಕೊಡುತ್ತೇವೆಂದು ಪತ್ರದ ಮುಖಾಂತರ ನನಗೆ ತಿಳಿಸಿರುತ್ತಾರೆ. ಆದರೆ ಕೊಡಬೇಕಾದ ಹಣವನ್ನು ಇಲ್ಲಿಯವರೆಗೆ ಯಾರಿಗೂ ಕೊಟ್ಟಿಲ್ಲ. ಅದಕ್ಕಾಗಿ ನಿಗಮದ ಹೇಳಿಕೆಯಂತೆ ಪ್ರಕಾರ ರೈತರಿಗೆ ತೀವ್ರಗತಿಯಲ್ಲಿ ಪರಿಹಾರ ಧನವನ್ನು ಸರಕಾರ ನಿಗಮದಿಂದ ಯಾವಾಗ ಕೊಡಿಸುವುದು ಎಂದು ತಿಳಿಯಪಡಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ. ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ತರಿಸಿಕೊಡುತ್ತೇನೆ.

೧೭. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಕಾರ್ಯದರ್ಶಿಯವರ ನೇಮಕಾತಿಯನ್ನು ಮಾಡದೇ ಇರುವುದು.

ಶ್ರೀ ರಾಮೆನಾಥ ರೈ.—ಮಾನ್ಯ ಅಧ್ಯಕ್ಷರೇ ಸರ್ಕಾರ ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ ಮಂಡಲ ಪಂಚಾಯತಿ ರಚನೆ ಮಾಡಿ ಅನೇಕ ತಿಂಗಳು ಕಳೆದರೂ ಕೂಡ ಇನ್ನೂ ಕೆಲವು ಮಂಡಲ ಪಂಚಾಯತಿಗಳಲ್ಲಿ ಕಾರ್ಯದರ್ಶಿಯವರ ನೇಮಕ ಆಗಿರುವುದಿಲ್ಲ, ಸಂಬಂಧಪಟ್ಟವರನ್ನೂ ಕೇಳಿದಾಗ ಸರಕಾರ ನಮಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಕೊಟ್ಟಿಲ್ಲ. ನೇಮಕಾತಿಗೆ ಅಭ್ಯರ್ಥಿಗಳನ್ನು ಸರಕಾರವೇ ಕೊಡಬೇಕಾಗಿರುವುದರಿಂದ ಜಿಲ್ಲಾ ಪರಿಷತ್‌ಗೆ ನೇಮಕ ಮಾಡಲು ಸಾಧ್ಯವಾಗಿಲ್ಲ. ಈ ರೀತಿ ಕೆಲವು ಮಂಡಲ್ ಪಂಚಾಯತಿ ಕಾರ್ಯದರ್ಶಿಗಳ ನೇಮಕಕ್ಕೆ ಬಾಕಿ ಇದೆ ಎಂದು ತಿಳಿಸಿರುತ್ತಾರೆ.

ಆದುದರಿಂದ ಈ ಬಗ್ಗೆ ಸರಕಾರ ಕ್ರಮ ಕೈಕೊಂಡು ಉಳಿದಿರುವ ಮಂಡಲ ಪಂಚಾಯತಿಗಳಲ್ಲಿ ಕಾರ್ಯದರ್ಶಿಗಳ ನೇಮಕವನ್ನು ಕೂಡಲೇ ಮಾಡುವಂತೆ, ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್‌ರಾಜ್, ಸಚಿವರ ಮುಖಾಂತರ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಗ್ರಾಮೀಣ ಮತ್ತು ಪಂಚಾಯತ್‌ರಾಜ್ ಸಚಿವರ ಪರವಾಗಿ).—

ರಾಜ್ಯದಲ್ಲಿ ಪ್ರಸಕ್ತ ೨೪೯ ಮಂಡಲ ಪಂಚಾಯತ್‌ಗಳು ಇರುತ್ತವೆ. ಅವುಗಳಲ್ಲಿ ಈಗಾಗಲೇ ೨೪೨ ಮಂಡಲ ಪಂಚಾಯತಿಗಳಿಗೆ ಕಾರ್ಯದರ್ಶಿಗಳನ್ನು ನೇಮಕಾತಿ ಮಾಡಲಾಗಿದೆ. ಉಳಿದ ೪೦ ಮಂಡಲ ಪಂಚಾಯತಿ ಕಾರ್ಯದರ್ಶಿಗಳನ್ನು ನೇಮಕ ಮಾಡಲು ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಈ ೪೦ ಮಂಡಲ ಪಂಚಾಯತಿಗಳ ಹುದ್ದೆಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಈಗಾಗಲೇ ಮುಖ್ಯ ಕಾರ್ಯದರ್ಶಿ, ಜಿಲ್ಲಾ ಪರಿಷತ್‌ರವರು ೧೭ ಮಂಡಲ ಪಂಚಾಯತಿಗಳಿಗೆ ನೇಮಕ ಮಾಡಿರು

ತ್ತಾರೆ. ಸರ್ಕಾರವು ಅವರು ಕೈಗೊಂಡಿರುವ ಕ್ರಮಗಳನ್ನು ಅನುಸಮ್ಮತಿಸಲು ಕ್ರಮವೆ ಕೈಗೊಳ್ಳ ಬೇಕಾಗಿರುತ್ತದೆ. ಉಳಿದ ಮಂಡಲ ಪಂಚಾಯತಿಗಳಿಗೆ ಕಂದಾಯ ಇಲಾಖೆಯನ್ನು ನೌಕರರುಗಳನ್ನು ನಿಯೋಜಿಸಲು ಕೋರಲಾಗಿದೆ. ಕಂದಾಯ ಇಲಾಖೆಯು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ನೌಕರರು ಗಳ ಪಟ್ಟಿಯನ್ನು ಒದಗಿಸಲು ಕೋರಿರುತ್ತಾರೆ. ಆದಷ್ಟು ಶೀಘ್ರವಾಗಿ ಉಳಿದ ಮಂಡಲ ಪಂಚಾಯತಿ ಗಳಿಗೂ ಕಾರ್ಯದರ್ಶಿಗಳನ್ನು ನೇಮಕ ಮಾಡಲು ಸರ್ಕಾರವು ತ್ವರಿತ ಕ್ರಮ ಕೈಗೊಳ್ಳುತ್ತದೆ.

ಆದರೆ ಕೆಲವು ನೌಕರರುಗಳು ಮಂಡಲ ಪಂಚಾಯತಿ ಕಾರ್ಯದರ್ಶಿಗಳಾಗಿ ಕಾರ್ಯಭಾರ ವಹಿಸಿ ಕೊಳ್ಳದೆ ಕೆಲವು ಹುದ್ದೆಗಳು ಖಾಲಿ ಇರುತ್ತವೆ. ಅವರ ಬಗ್ಗೆ ಶಿಸ್ತು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇದರ ಜೊತೆಗೆ ಕೆಲವರು ದೀರ್ಘ ರಜೆಯ ಮೇಲೆ ಅಥವಾ ಸ್ವಯಿಚ್ಛಾ ನಿವೃತ್ತಿಯನ್ನು ಬಯಸಿ ಗೈರು ಹಾಜರಾಗಿರುವುದರಿಂದ ಹುದ್ದೆಗಳು ಖಾಲಿಯಿರಬಹುದು. ಅಂತಹ ಖಾಲಿ ಹುದ್ದೆಗಳಿಗೆ ಹೊಸ ನೇಮಕಾತಿಯನ್ನು ಮಾಡಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನವರು ತಾತ್ಕಾಲಿಕ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ.

೧೮. ಹೆಗ್ಗಡದೇವನಕೋಟೆ ಕಾಡಾನೆಗಳ ಹಾವಳಿಯನ್ನು ತಪ್ಪಿಸುವುದು.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ಶಿವಣ್ಣ.—ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಕಾಡಾನೆಗಳಿಂದ ತುಂಬಾ ಹಾನಿ ಉಂಟಾಗುತ್ತಿದೆ. ಜಮೀನಿನಲ್ಲಿ ಬೆಳೆಯುವ ಫಸಲು, ತೆಂಗು, ಬಾಳೆ, ತೋಟಗಳಿಗೆ ಆನೆಗಳು ಆಗಾಗ್ಗೆ ನುಗ್ಗಿ ನಷ್ಟ ಉಂಟು ಮಾಡುತ್ತಿವೆ. ಆಗಿಂದಾಗ್ಗೆ ಊರುಗಳಿಗೂ ಸಹ ಆನೆಗಳು ಧಾಳಿ ಮಾಡುತ್ತಿರುವುದರಿಂದ ಜನರು ಪ್ರಾಣಭೀತಿಯಿಂದ ಹೆದರಿರುತ್ತಾರೆ. ಪ್ರಾಣಹಾನಿಗಳೂ ಸಹ ಸಂಭವಿಸುತ್ತಿವೆ.

ಇಷ್ಟಾದಾಗ್ಯೂ ಸಹ ಅರಣ್ಯ ಇಲಾಖೆ ಯಾವುದೇ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳದಿರುವುದ ಆಶ್ಚರ್ಯ ಮತ್ತು ವಿಷಾದನೀಯ.

ಕಾಡಿನಲ್ಲಿರಬೇಕಾದ ಕಾಡಾನೆಗಳು ಊರನ್ನು ಪ್ರವೇಶಿಸುತ್ತಿದ್ದರೂ ಅವುಗಳನ್ನು ತಡೆಗಟ್ಟಲು ಅರಣ್ಯಾಧಿಕಾರಿಗಳು ಪ್ರಯತ್ನಿಸಿಲ್ಲ. ಜನರೇ ಧೈರ್ಯ ಮಾಡಿ ಅವುಗಳನ್ನು ಓಡಿಸುವಂತಹ ಸಂದರ್ಭ ಬಂದಿದೆ.

ಆದ್ದರಿಂದ ಆನೆಗಳು ಬಾರದಂತೆ ಮುನ್ನೆಚ್ಚರಿಕೆಯಾಗಿ ಕೂಡಲೇ ಅಗತ್ಯ ಕ್ರಮ ಕೈಕೊಳ್ಳಲು ಅರಣ್ಯ ಸಚಿವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಮೈಸೂರು ಜಿಲ್ಲೆಯಲ್ಲಿ (ಹೆಗ್ಗಡದೇವನ ಕೋಟೆ ತಾಲ್ಲೂಕು ಸೇರಿ) ಕಾಡಾನೆಗಳಿಂದ ಹಾಗೂ ಇತರೆ ವನ್ಯಪ್ರಾಣಿಗಳಿಂದ ಬೆಳೆ, ಹಾನಿ ಮತ್ತು ಇತರೆ ರೀತಿಯ ಹಾವಳಿಯಾಗುತ್ತಿರುವುದು ನಿಜವಿರುತ್ತದೆ ಈ ಜಿಲ್ಲೆಯಲ್ಲಿ ಹಿಂದೆ ವನ್ಯಪ್ರಾಣಿಗಳಿಗೆಂದೇ ವೀಸಲಾದ ಪ್ರದೇಶಗಳಲ್ಲಿ ಜನರು ಕೃಷಿಯನ್ನು ಆರಂಭಿಸಿತುವುದರಿಂದ ವನ್ಯ ಪ್ರಾಣಿಗಳಿಗೆಂದೇ ವೀಸಲಾದ ಪ್ರದೇಶವು ಕಾಲಕ್ರಮೇಣ ಕಡಿಮೆ ಯಾಗುತ್ತಿದ್ದು, ಇದರಿಂದಾಗಿ ಕೆಲವು ಸಲ ಈ ಪ್ರಾಣಿಗಳು ಕಾಡಿನಿಂದ ಹೊರಬರುವುದು ಹಾಗೂ ಕಾಡಿ ನಿಂದ ಕಟ್ಟಿಗೆ ಇತ್ಯಾದಿ ಅರಣ್ಯ ಉತ್ಪನ್ನಗಳನ್ನು ಶೇಖರಿಸಿ ತರುವವರ ಮೇಲೂ ದಾಳಿ ಮಾಡುವುದು ಸಹಜವಾಗಿದೆ. ಇಂತಹ ದಾಳಿಯಿಂದ ಹಾನಿಗೊಳಗಾದವರಿಗೆ ಹಾಗೂ ಪ್ರಾಣಹಾನಿಗೊಂಡ ಪ್ರಕರಣ ಗಳಲ್ಲಿ ಇಲಾಖೆ ಸೂಕ್ತ ಪರಿಹಾರವನ್ನು ವಿಚಾರಣೆಯ ನಂತರ ಕಾನೂನಿಗೆ ಅನುಸಾರವಾಗಿ ಕೊಡಲಾಗುತ್ತಿದೆ.

ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಉಂಟಾದ ನಷ್ಟಗಳಿಗೆ ಈ ಕೆಳಕಂಡಂತೆ ಪರಿಹಾರ ಧನ ನೀಡ ಲಾಗಿದೆ. ೧-೪-೧೯೮೬ ರಿಂದ ೩೧-೩-೧೯೮೭ರ ಅವಧಿಯಲ್ಲಿ ಒಟ್ಟು ೭೪೭ ಬೆಳೆಹಾನಿ ಪ್ರಕರಣಗಳಿಗೆ ರೂ. ೨,೯೩, ೫೦೦-೦೦ ಪರಿಹಾರ ಧನವನ್ನು ಹಾಗೂ ಖಾಯಂ ಅಂಗವಿಹೀನ ಉಂಟಾದ ೨ ಪ್ರಕರಣ ಗಳಲ್ಲಿ ರೂ. ೪,೦೦೦-೦೦ ಪರಿಹಾರ ಧನವನ್ನು ೧-೪-೧೯೮೭ ರಿಂದ ೩೧-೧೨-೧೯೮೭ರ ಅವಧಿಯಲ್ಲಿ